CIN:U40109KA2004SGCO35177 Web site: www.cescmysore.org

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೋಂದಾಯಿತ ಕಛೇರಿ ವಿಳಾಸ: ನಿಗಮ ಕಾರ್ಯಾಲಯ, ನಂ: 29, ವಿಜಯನಗರ 2ನೇ ಹಂತ, ಹಿನ್‌ಕಲ್, ಮೈಸೂರು-570 017

ದೂರವಾಣಿ ಸಂಖ್ಯೆ: 0821-2560803
ಮೊಬೈಲ್: 9448994743.
E-mail: aeekmp1@cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸ.ನಿ.ನಿ., ಕುವೆಂಪುನಗರ ಉಪವಿಭಾಗ,
ಗಗನಚುಂಬಿ ಜೋಡಿರಸ್ತೆ, ಮೈಸೂರು- 570 023.

## ಸಭಾ ನಡಾವಳಿ

ದಿನಾಂಕ 21-08-2017 ರಂದು ಮಧ್ಯಾಹ್ನ 3.00 ಗಂಟೆಗೆ ಅಧೀಕ್ಷಕ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ., ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಕುವೆಂಪುನಗರ ಉಪವಿಭಾಗದ ಜನಸಂಪರ್ಕ ಸಭೆಯ ನಡಾವಳಿ.

ಈ ಕೆಳಕಂಡ ಅಧಿಕಾರಿಗಳು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದರು.

1. ಮಮತ ಎಂ ಸಂದೀಪ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ, ಸೆಸ್ಕ್, ಮೈಸೂರು.
2. ಡಿ.ಕೆ. ರಂಗನಾಥ್, ಸಹಾಯಕ ಇಂಜಿನಿಯರ್(ವಿ), ಸರಸ್ವತಿಪುರಂ ಶಾಖೆ,
3. ಆರ್, ಮದನ್, ಸಹಾಯಕ ಇಂಜಿನಿಯರ್(ವಿ), ಅರವಿಂದ ಶಾಖೆ,
4. ಮುರಳಿ, ಸಹಾಯಕ ಇಂಜಿನಿಯರ್(ವಿ), ನಿವೇದಿತ ಶಾಖೆ,
5. ಹರ್ಷವರ್ಧನ್, ಕಿರಿಯ ಇಂಜಿನಿಯರ್(ವಿ), ಸರಸ್ವತಿಪುರಂ ಶಾಖೆ,
6. ಮಹದೇವಸ್ವಾಮಿ, ಪ್ರಭಾರ ಸಹಾಯಕ ಲೆಕ್ಕಾಧಿಕಾರಿ, ಕಂದಾಯ ಶಾಖೆ.

ಮೊದಲಿಗೆ ಅಧೀಕ್ಷಕ ಇಂಜಿನಿಯರ್(ವಿ .ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುವ ಮೂಲಕ ಕೆ.ಇ.ಆರ್.ಸಿ. ನಿಯಮಾವಳಿಯ ಅನ್ವಯ ಪ್ರತಿ 3 ತಿಂಗಳಿಗೊಮ್ಮೆ ಎಲ್ಲಾ ಉಪವಿಭಾಗಗಳಲ್ಲಿ ಜನಸಂಪರ್ಕ ಸಭೆಯನ್ನು ನಡೆಸುತ್ತಿರುವುದಾಗಿ ತಿಳಿಸಿ ಈ ಹಿಂದೆ ದಿನಾಂಕ: 09-06-2017 ರಂದು ನಡೆಸಿದ ಜನಸಂಪರ್ಕ ಸಭೆಯಲ್ಲಿ ಗ್ರಾಹಕರು ತಿಳಿಸಿದ್ದ ಸಮಸ್ಯೆಗಳನ್ನು ಪರಿಹರಿಸಿರುವ ಬಗ್ಗೆ ಪರಿಶಿಲಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರಲ್ಲಿ ಈ ಕೆಳಕಂಡ ಗ್ರಾಹಕರು ತಮ್ಮ ಸಲಹೆಗಳು ಹಾಗೂ ಅವರ ಸಮಸ್ಯೆಗಳ ಬಗ್ಗೆ ತಿಳಿಸಿರುತ್ತಾರೆ.

1. <u>ಶ್ರೀ ಅಶ್ವಥನಾರಾಯಣ, ವಿದ್ಯುತ್ ಗುತ್ತಿಗೆದಾರರು, ಮೈಸೂರು.</u>

ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ನೋಂದಾಜಿಸುವಾಗ ಮೊದಲು ಸಂಬಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ ನಂತರ ಅರ್ಜಿಯನ್ನು ನೋಂದಾಯಿಸಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು ಹಾಗೂ ಜನಸಂಪರ್ಕ ಸಭೆ ನಡೆಸುವ ದಿನಾಂಕ ಹಾಗೂ ದಿನಾಂಕ ಬದಲಾದಲ್ಲಿ ಈ ಬಗ್ಗೆ ಪ್ರಚಾರ ಮಾಡುವ ಬಗ್ಗೆ ಸೂಚಿಸಿದರು ಹಾಗೂ ಜನಸಂಪರ್ಕ ಸಭೆ ನಡೆಸುವ ಕುರಿತು ಗ್ರಾಹಕರ ಮೊಬೈಲ್‌ಗಳಲ್ಲಿ ಊರ್ಜಾ ಮಿತ್ರದಲ್ಲಿ ಸಂದೇಶ ಕಳುಹಿಸುವ ಬಗ್ಗೆ ತಿಳಿಸಿದರು.

<u>ಅಧೀಕ್ಷಕ ಇಂಜಿನಿಯರ್(ವಿ):</u> ಗ್ರಾಹಕರು ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸದೆ ಅರ್ಜಿ ನೋಂದಾಜಿಸುವುದರಿಂದ, ಗಣಕಯಂತ್ರದಲ್ಲಿ ಅರ್ಜಿ ನೋಂದಾಯಿಸಿ ಸಂಪರ್ಕವನ್ನು ಪಡೆದಿರುವುದಿಲ್ಲದ ಬಗ್ಗೆ ತಂತ್ರಾಂಶದಲ್ಲಿ ತೋರಿಸುವುದರಿಂದ, ಸಂಬಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿದ ನಂತರ ಅರ್ಜಿಯನ್ನು ನೋಂದಾಯಿಸಿಕೊಳ್ಳಲಾಗುತ್ತಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ ರವರು ತಿಳಿಸಿದ್ದರ ಮೇರೆಗೆ, ಇವರು ನೀಡಿರುವ ವಿವರ ಸಮಂಜಸವಾಗಿರುವುದರಿಂದ, ಇದರಿಂದ ಯಾವುದೇ ಸಮಸ್ಯೆ ಇರುವುದಿಲ್ಲವಾದ್ದರಿಂದ ಈ ಕ್ರಮವನ್ನು ಮುಂದುವರೆಸುವಂತೆ ತಿಳಿಸಿದರು ಹಾಗೂ ಇದರಿಂದ ಸಮಸ್ಯೆ ಉಂಟಾದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಇನ್ನು ಮುಂದೆ ಜನಸಂಪರ್ಕ ಸಭೆ ನಡೆಸುವ ಬಗ್ಗೆ ಹೆಚ್ಚಿನ ಪ್ರಚಾರ ಕೈಗೊಳ್ಳಲು ಉಪವಿಭಾಗಾಧಿಕಾರಿಗಳಿಗೆ ಸೂಚಿಸಿದರು ಹಾಗೂ ಊರ್ಜಾಮಿತ್ರದಲ್ಲಿ ಜನಸಂಪರ್ಕ ಸಭೆಯ ನಡೆಸುವ ಬಗ್ಗೆ ಸಂದೇಶವನ್ನು ಕಳುಹಿಸುವ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು.

Mamatha M

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕುವೆಂಪುನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು

ಸಂಖ್ಯೆ: ಸಕಾನಿಇಂ(ವಿ), ಸ.ಇಂ(ತಾಂ)/ಕುನ/ಉವಿ/ 1404-10 ದಿನಾಂಕ: 30/8/17

ಪ್ರತಿಯನ್ನು,

1. ಅಧೀಕ್ಷಕ ಇಂಜಿನಿಯರ್(ವಿ), ಕಾ.ಮತ್ತು ಪಾ.ವೃತ್ತ, ಚಾವಿಸನಿನಿ, ಮೈಸೂರು ರವರ ಅವಗಾಹನೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲ ವಿಭಾಗ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
3. ಶಾಖಾಧಿಕಾರಿಗಳು, ಸರಸ್ವತಿಪುರಂ ಶಾಖೆ, ಅರವಿಂದ ಶಾಖೆ, ನಿವೇದಿತ ಶಾಖೆ, ಕಂದಾಯ ಶಾಖೆ, ತಾಂತ್ರಿಕ ಶಾಖೆ, ಕುವೆಂಪುನಗರ ಉಪವಿಭಾಗ, ಚಾವಿಸನಿನಿ.,ಮೈಸೂರು ರವರಿಗೆ.

ಪ್ರ.ಕ.